**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರು ಕನಕಪುರ ಇವರ ನ್ಯಾಯಾಲಯದಲ್ಲಿ</u>**

**ಸಿಸಿ ಸಂಖ್ಯೆ : 793/2018**

**ಪಿರ್ಯಾದುದಾರರು :** ರಾಜ್ಯದ ಪರ ಕನಕಪುರ ಸಂಚಾರಿ ಪೊಲೀಸ್ ಠಾಣೆ

– ವಿರುದ್ದ –

**ಆರೋಪಿತರು** : ಸಂತೋಷ್ ಕುಮಾರ್ ವಿ

ಬಿನ್ ವೆಂಕಟರಮಣಸ್ವಾಮಿ , 29 ವರ್ಷ

ವಿವೇಕಾನಂದ ನಗರ, 3ನೇ ಕ್ರಾಸ್

ಕನಕಪುರ

## <u>ಆಪಾದನೆ</u>

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ಆಪಾದನೆ ಏನೆಂದರೆಃ-**

ಮೊದಲನೇಯದಾಗಿ ದಿನಾಂಕಃ 07.02.2017 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ಕನಕಪುರ ಸಂಚಾರಿ ಪೋಲೀಸ್ ಠಾಣಾ ಸರಹದ್ದು ಗಡಸಹಳ್ಳಿ ಕ್ರಾಸ್ ಮುಂದಿನ ಕನಕಪುರ ಸಾತನೂರು ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಆಟೋ ನಂಬರ್ ಕೆಎ-42-6234 ಆಟೋವನ್ನು ಸಾತನೂರು ಕಡೆಯಿಂದ ಕನಕಪುರ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿದ್ದು. ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ **279** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಗಡಸಹಳ್ಳಿ ರಸ್ತೆ ಕಡೆಗೆ ಹೋಗಲು ಹೋಗುತ್ತಿದ್ದ ಚಾಸಾ-1 ಈರಯ್ಯ ರವರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಮೋಟಾರ್ ಸೈಕಲ್ ನಂ.ಕೆಎ-42-ಎಲ್-3065 ಗೆ ಡಿಕ್ಕಿ ಹೊಡೆಸಿದ ಪರಿಣಾಮ ಮೋಟಾರ್ ಸೈಕಲ್ ಹಿಂಬದಿ

ಸವಾರ ವೀರಭದ್ರಯ್ಯರವರಿಗೆ ಮುಖ, ಎಡತೋಳು, ಎಡತೊಡೆ ಹಾಗೂ ಮೈಕೈಗೆ ತೀವ್ರವಾದ ರಕ್ತಗಾಯವಾಗಿ ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಬೆಂಗಳೂರು ಸಂಜಯ್ ಗಾಂಧಿ ನಂತರ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು ಗುಣವಾಗದೇ ಅದೇ ದಿನ ರಾತ್ರಿ 11.30 ಗಂಟೆಯಲ್ಲಿ ಮೃತ ಪಟ್ಟಿದ್ದು. ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ.

ಮೂರನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತದ ಸಮಯದಲ್ಲಿ ಆಟೋ ಚಾಲನೆ ಮಾಡುವ ಚಾಲನಾ ಪರವಾನಿಗೆ ಮತ್ತು ಆಟೋ ವಿಮೆ ಸೌಲಭ್ಯವನ್ನು ಮಾಡಿಸದೇ ಇದ್ದು. ಸದರಿ ನಿಮ್ಮ ಕೃತ್ಯವು ಮೋಟಾರ್ ವಾಹನ ಕಾಯ್ದೆ ಕಲಂ 3, 181, 146, 196 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ.

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 25.06.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆಪಾದನೆಯನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**

**ಆರೋಪಿಯ ಸಹಿ**